# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.561/2015

| | | | |
|---|---|---|---|
| ಚಾಸಾ | **13** | ಪ್ರಾಸಾ | **2** |
| ಹೆಸರು | | ಸಿ ಸಂಪತ್ ಕುಮಾರ್ | |
| ತಂದೆಯ ಹೆಸರು | | ಲೇಟ್ ಚಿಕ್ಕಪ್ಪಯ್ಯ | |
| ವಯಸ್ಸು | | **67**ವರ್ಷಗಳು | |
| ಉದ್ಯೋಗ | | ನಿವೃತ್ತ ಎಸಿಪಿ | |
| ವಿಳಾಸ | | ರಾಮನಗರ | |

ದಿನಾಂಕ**.15.12.2025**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ನಾನು ದಿನಾಂಕ**.26.10.2013** ರಿಂದ **07.05.2015** ರವರೆಗೆ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಸಿಪಿಐ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ**.**

ದಿಃ**30.11.2014** ರಂದು ನಾನು ಈ ಪ್ರಕರಣದ ಕಡತವನ್ನು ಚಾಸಾ**-12** ರವರಿಂದ ಪಡೆದುಕೊಂಡು ಪರಿಶೀಲಿಸಿ ಮುಂದುವರೆದ ತನಿಖೆಯನ್ನು ಕೈಗೊಂಡಿರುತ್ತೇನೆ**.**

ಅದೇ ದಿನ ಕನಕಪುರದ ಸರ್ಕಾರಿ ಆಸ್ಪತ್ರೆಯಲ್ಲಿರುವ ಶವಗಾರದ ಕೋಣೆಗೆ ಭೇಟಿ ನೀಡಿ ಅಲ್ಲಿ ಮೃತ ವೇಲನ್ ರವರ ಶವದ ಮೇಲೆ ಪಂಚರಾದ ಚಾಸಾ-**4** ರಿಂದ ಚಾಸಾ-**6** ರವರ ಸಮಕ್ಷಮ ಶವಪಂಚನಾಮೆ ಕ್ರಮ ಜರುಗಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ-**7** ಮತ್ತು ಚಾಸಾ-**8** ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಮೃತನ ಶವವನ್ನು ಅವರ ಕುಟುಂಬದವರಿಗೆ ನಿಯಮಗಳಾನುಸಾರ ವರ್ಗಾಯಿಸಿರುತ್ತೇನೆ.

ದಿನಾಂಕ.**30.11.2014**ರಂದು ಸಾಕ್ಷಿದಾರರಾದ ಚಾಸಾ-**1,** ಚಾಸಾ-**2** ಮತ್ತು ಚಾಸಾ-**3** ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕ.**15.12.2014**ರಂದು ಮೃತನಿಗೆ ಸಂಬಂಧಿಸಿದಂತೆ ಶವಪಂಚನಾಮ ವರದಿಯನ್ನು ಚಾಸಾ-**10** ರವರಿಂದ ಪಡೆದುಕೊಂಡು ಕಡತಕ್ಕೆ ಸೇರಿಸಿಕೊಂಡಿರುತ್ತೇನೆ.

ಆದೇ ದಿನ ಅಪಘಾತ ಪಡಿಸಿದ ವಾಹನಕ್ಕೆ ಸಂಬಂಧಿಸಿದಂತೆ ಐಎಂವಿ ವರದಿಯನ್ನು ನೀಡುವಂತೆ ಕೋರಿ ಚಾಸಾ-**11** ರವರಿಗೆ ನಿವೇದಿಸಿಕೊಂಡಿರುತ್ತೇನೆ.

ದಿನಾಂಕ.**05.01.2015**ರಂದು ಅಪಘಾತ ಪಡಿಸಿದ ವಾಹನದ ಮಾಲೀಕನಾದ ಚಾಸಾ-**9** ರವರಿಗೆ ಐಎಂವಿ ಕಾಯ್ದೆ ಕಲಂ **133**ರಡಿಯಲ್ಲಿ ನೋಟಿಸ್ ಜಾರಿ ಮಾಡಿರುತ್ತೇನೆ. ಆದೇ ದಿನ ಚಾಸಾ-**9** ರವರು ಠಾಣೆಗೆ ಹಾಜರಾಗಿ ವಾಹನಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿದ ಮೇರೆಗೆ ಅವುಗಳನ್ನು ಪರಿಶೀಲಿಸಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಆದೇ ದಿನ ಅಪಘಾತ ಪಡಿಸಿದ ವಾಹನದ ಚಾಲಕನಾದ ಶರವಣ ರವರು ನನ್ನ ಸಮಕ್ಷಮ ತಾವಾಗಿಯೇ ಹಾಜರಾದ ಮೇರೆಗೆ

ಆತನನ್ನು ವಿಚಾರಿಸಿ ದಸ್ತಗಿರಿ ಕ್ರಮಕೈಗೊಂಡು ಸೂಕ್ತ ಜಾಮೀನಿನ ಮೇಲೆ ಆರೋಪಿಯನ್ನು ಬಿಡುಗಡೆ ಮಾಡಿರುತ್ತೇನೆ. ಆದೇ ದಿನ ಅಪಘಾತ ಪಡಿಸಿದ ವಾಹನದ ಮಾಲೀಕರಾದ ಚಾಸಾ-9 ರವರಿಂದ ನಷ್ಟಭರ್ತಿ ಪತ್ರ ಬರೆಸಿಕೊಂಡು ಅವರ ತಬಾಕ್ಕೆ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ.

ದಿನಾಂಕ.11.02.2015ರಂದು ಅಪಘಾತ ಪಡಿಸಿದ ವಾಹನಕ್ಕೆ ಸಂಬಂಧಿಸಿದಂತೆ ಐಎಂವಿ ವರದಿಯನ್ನು ಚಾಸಾ-11 ರವರಿಂದ ಪಡೆದುಕೊಂಡು ಕಡತಕ್ಕೆ ಸೇರಿಸಿಕೊಂಡಿರುತ್ತೇನೆ. ತನಿಖಾ ಕಾಲದಲ್ಲಿ ಅಪಘಾತ ಪಡಿಸಿದ ವಾಹನವು ನೋಂದಣಿಯಾಗಿಲ್ಲ ಮತ್ತು ಅದಕ್ಕೆ ಯಾವುದೇ ವಿಮೆ ಇಲ್ಲದಿರುವ ಸಂಗತಿಯು ಗೊತ್ತಾಗಿರುತ್ತದೆ.

ಸಾಕ್ಷಿಯು ಕಡತದಲ್ಲಿರುವ ಶವ ತನಿಖಾ ವರದಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಶವ ತನಿಖಾ ವರದಿಯನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಕಡತದಲ್ಲಿರುವ ಪಿಎಂ ವರದಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಪಿಎಂ ವರದಿಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಕಡತದಲ್ಲಿರುವ ಐಎಂವಿ ವರದಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಐಎಂವಿ ವರದಿಯನ್ನು ಈಗಾಗಲೇ ನಿಪಿ-**6** ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**6(**ಎ**)** ಎಂದು ಗುರುತಿಸಲಾಯಿತು.

ಸಾಕ್ಷಿಯು ಕಡತದಲ್ಲಿರುವ ಐಎಂವಿ ಕಲಂ **133**ರಡಿಯಲ್ಲಿ ಚಾಸಾ-**9** ರವರಿಗೆ ನೀಡಿದ ನೋಟಿಸ್ ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಐಎಂವಿ ಕಲಂ **133**ರ ನೋಟಿಸ್ ನ್ನು ನಿಪಿ-**7** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**7(**ಎ**)** ಎಂದು ಗುರುತಿಸಲಾಯಿತು.

ಸಾಕ್ಷಿಯು ಕಡತದಲ್ಲಿರುವ ನಷ್ಟಭರ್ತಿ ಪತ್ರವನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಗುರುತಿಸಿದ ನಷ್ಟಭರ್ತಿ ಪತ್ರವನ್ನು ನಿಪಿ-**8** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**8(**ಎ**)** ಎಂದು ಗುರುತಿಸಲಾಯಿತು.

ನಂತರ ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ದ ಅಪರಾಧ ಸಾಬೀತಾದ ಕಾರಣ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ನನ್ನ ಸಮಕ್ಷಮ ಹಾಜರಾಗಿ ನನ್ನಿಂದ ಜಾಮೀನು ಪಡೆದುಕೊಂಡ ಆರೋಪಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ-

ನಾನು ಈ ಪ್ರಕರಣದಲ್ಲಿ ಯಾವುದೇ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಕೆಳಅಧಿಕಾರಿಗಳು ಮಾಡಿದಂತಹ ವರದಿಗಳಿಗೆ ನಾನು ಸಹಿ ಮಾತ್ರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಶವ ತನಿಖಾ ಪಂಚನಾಮೆಗೆ ನಾನು ಯಾವುದೇ ಸಾಕ್ಷಿದಾರರ ಸಹಿಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-**9** ರವರಿಗೆ ಯಾವುದೇ ನೋಟಿಸ್ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ-**7** ಮತ್ತು ಚಾಸಾ-**8** ರವರು ನನ್ನ ಸಮಕ್ಷಮ ಯಾವುದೇ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-**4** ರಿಂದ ನಿಪಿ-**8** ರಂತೆ ಇರುವ ದಾಖಲೆಗಳನ್ನು ಈ ಪ್ರಕರಣಕೋಸ್ಕರವೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿಯ ತಪ್ಪಿನಿಂದಲೆ ಸದರಿ ಅಪಘಾತವಾಗಿಲ್ಲ ಎಂಬ ಸಂಗತಿಯು ನಾನು ತನಿಖೆ ಮಾಡುವ ಕಾಲಕ್ಕೆ ಸಾಬೀತ್ತಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ-**1** ರಿಂದ ಚಾಸಾ-**3** ರವರು ನನ್ನ ಸಮಕ್ಷಮ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಚಾಸಾ-**1** ರಿಂದ ಚಾಸಾ-**3**, ಚಾಸಾ-**7** ಮತ್ತು ಚಾಸಾ-**8** ರವರ ಹೇಳಿಕೆಗಳನ್ನು ಈ ಪ್ರಕರಣಕೋಸ್ಕರವೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತವಾಗಿಲ್ಲ ಎಂಬ ಸಂಗತಿಯು ತನಿಖಾ ಕಾಲದಲ್ಲಿ ಸಾಬೀತಾಗಿದ್ದರು ಮೃತರ ಕುಟುಂಬಕ್ಕೆ ನಾನು ಸಹಾಯ ಮಾಡಬೇಕೆಂಬ ದುರುದ್ದೇಶದಿಂದ ಆರೋಪಿಯ ತಪ್ಪಿನಿಂದ ಅಪಘಾತವಾಗದೇ ಇದ್ದರು ಆತನ ವಿರುದ್ದ ಈ ಸುಳ್ಳು ಕೇಸನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ:- ಇಲ್ಲ</u>

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**